ವಿಧೇಯಕದ ಬಗ್ಗೆ, ತಮ್ಮಲ್ಲಿ ಕೂಡ ಬಹಳ ಜನ support ಕೂಡ ಮಾಡಿದ್ದೀರಿ. ಅದನ್ನು ತರುತ್ತೇವೆ. ಕೃಷಿ ಉತ್ಪನ್ನ ಮಾರುಕಟ್ಟೆ ವಿಚಾರದಲ್ಲಿ ಮಾನ್ಯ ದರ್ಶನಾಪುರರವರು ಒಂದು ಬಿಲ್‌ನ್ನು ಮಂಡನೆಯನ್ನು ಮಾಡುತ್ತಾರೆ.

ಶ್ರೀ ಎನ್. ಧರ್ಮಸಿಂಗ್ :– ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ತಾವು ನಿನ್ನೆ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದರಿಂದ ಹಿಂದೆ ಹೋಗುತ್ತಿದ್ದೀರಿ. ಸದನ ಪ್ರಾರಂಭವಾದ ಮೇಲೆ ಬರಗಾಲದ ಮೇಲೆ ಚರ್ಚೆಗೆಂದು ನಿನ್ನೆ ನೀವು ಒಪ್ಪಿಕೊಂಡ ಮೇಲೆ, ವಿಧೇಯಕಗಳನ್ನು ಮಂಡಿಸಿ ಅನುಮೋದನೆ ಮಾಡಿ ಸಂಪೂರ್ಣವಾದ ಸಹಕಾರವನ್ನು ರಾತ್ರಿ 8 ಗಂಟೆಯವರೆಗೆ ತಮಗೆ ಕೊಟ್ಟಿದ್ದೇವೆ. ರಾತ್ರಿ 8 ಗಂಟೆಯವರೆಗೆ ನಾವೆಲ್ಲರೂ ಇದ್ದೆವು, ಇನ್ನು ನಿಮ್ಮವರು ಯಾರೂ ಇರಲಿಲ್ಲ. ಮುಖ್ಯಮಂತ್ರಿಗಳು ಮಂಡನೆ ಮಾಡಿರುವ ಬಿಲ್‌ಗೆ ನಾವು ಅನುಮೋದನೆ ಕೊಟ್ಟಿದ್ದೇವೆ. ಆದರೆ ಜೊತೆಗೆ ಶಿಕ್ಷಣದ ಬಿಲ್‌ಗೂ ಕೂಡ ಮನ್ನಣೆ ಮಾಡಿದ್ದೇವೆ. ಇವತ್ತು ಈ ಬರಗಾಲದ ಬಗ್ಗೆ ಚರ್ಚೆ ಆಗಬೇಕು. ಈ ಚರ್ಚೆ ಬಿಟ್ಟು ವಿಧೇಯಕಗಳನ್ನು ಮಂಡಿಸುವುದಾದರೆ, ನಾವು ಅದರ ಬಗ್ಗೆ ಆಕ್ಷೇಪಣೆ ಮಾಡುತ್ತೇವೆ, ಮತ್ತು ಈ ಬರಗಾಲದ ಬಗ್ಗೆ ಈಗಲೇ ಚರ್ಚೆ ಪ್ರಾರಂಭವಾಗಬೇಕೆಂದು ನಾವೀಗ ಪ್ರತಿಭಟನೆ ಇಲ್ಲಿಯೇ ಮಾಡುತ್ತೇವೆ.

ಅಧ್ಯಕ್ಷರು :– ವಿರೋಧ ಪಕ್ಷದ ನಾಯಕರು ಈ ರೀತಿ ದುಡುಕಿದರೆ ಹೇಗೆ? ಸ್ವಲ್ಪ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :– ಇವತ್ತು ಕೊನೆಯಲ್ಲವೆ ? ನಮಗೆ ಅನುಮತಿ ಕೊಡಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಪ್ರತಿಭಟನೆಯಲ್ಲಿ ತೊಡಗಿದರು)

ಶ್ರೀ ಹೆಚ್.ಡಿ. ಬಸವರಾಜು :– ನಿಮ್ಮ ಉದ್ದೇಶವೇ ನಮಗೆ ಅರ್ಥವಾಗುತ್ತಿಲ್ಲ. ಸದನ ನಡೆಯಬೇಕೆ ಬೇಡವೆ? ನೀವು ಒಂದು ಸಲ ವಿಧೇಯಕಗಳು ಪಾಸ್ ಆಗಬೇಕೆಂದು ಹೇಳುತ್ತೀರಿ, ವಿಧೇಯಕಗಳು ಪಾಸ್ ಮಾಡಲಿಕ್ಕೆ ಸಹಕಾರ ಕೊಡುತ್ತೇವೆಂದು ಹೇಳುತ್ತೀರಿ, ಇದೇನಾ ನಿಮ್ಮ ಸಹಕಾರ?